For more job news visit : www.kpscvaani.com

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ
ಕಂಪನಿ ಕಾರ್ಯಾಲಯ, ಕೆ.ಆರ್ ವೃತ್ತ, ಬೆಂಗಳೂರು-560001

ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2524/2024-25/ ದಿನಾಂಕ: 11.06.2026

ಅಧಿಸೂಚನೆ- ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

ವಿಷಯ: ಕಿರಿಯ ಪವರ್ ಮ್ಯಾನ್ (ಎನ್.ಕೆ.ಕೆ ಮತ್ತು ಕೆ.ಕೆ) ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24(NKK/KK), ದಿನಾಂಕ: 14.10.2024.
2. ದಾಖಲಾತಿ ಪರಿಶೀಲನೆಗೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2524/2024-25, ದಿನಾಂಕ: 25.02.2025 ಮತ್ತು 11.03.2025.
3. ಸಹನ ಶಕ್ತಿ ಪರೀಕ್ಷೆ ಅಧಿಸೂಚನೆ ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2524/2024-25, ದಿನಾಂಕ: 31.05.2025
4. ತಾತ್ಕಾಲಿಕ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2524/2024-25 ದಿನಾಂಕ: 11.03.2026

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24, ದಿನಾಂಕ:14.10.2024 ಕ್ಕೆ ಅನುಗುಣವಾಗಿ, ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ (ಎಸ್.ಎಸ್.ಎಲ್.ಸಿ/10ನೇ ತರಗತಿ) ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇಲೆ, ದಿನಾಂಕ: 09.06.2025 ರಿಂದ 12.06.2025 ರವರೆಗೆ ಅಧಿಸೂಚಿತ ಹುದ್ದೆಗಳ 1:5 ರ ಅನುಪಾತದಲ್ಲಿ ನಡೆಸಲಾದ ಸಹನ ಶಕ್ತಿ ಪರೀಕ್ಷೆಯಲ್ಲಿ ಕಿರಿಯ ಪವರ್ ಮ್ಯಾನ್ (ಎನ್.ಕೆ.ಕೆ ಮತ್ತು ಕೆ.ಕೆ) ಹುದ್ದೆಗ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off) ಅಂಕಗಳೊಂದಿಗೆ, ದಿನಾಂಕ:11.03.2026 ರಂದು ಬೆವಿಕಂ ಅಂತರ್ಜಾಲ http://bescom.karnataka.gov.in/Recruitment ದಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ನಿಗದಿತ ಕಾಲಾವಧಿಯೊಳಗೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಅದರನ್ವಯ, ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off) ಅಂಕಗಳೊಂದಿಗೆ, ಬೆವಿಕಂ ಅಂತರ್ಜಾಲ http://bescom.karnataka.gov.in/Recruitment ದಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಅಂತಿಮ ಆಯ್ಕೆ ಪಟ್ಟಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ ರಿಟ್ ಅರ್ಜಿ ಸಂಖ್ಯೆ: 200448/2025 ರಲ್ಲಿನ ಅಂತಿಮ ತೀರ್ಪಿಗೊಳಪಟ್ಟು ಪ್ರಕಟಿಸಲಾಗಿದೆ.

ಕಿರಿಯ ಪವರ್ ಮ್ಯಾನ್ (ಎನ್.ಕೆ.ಕೆ ಮತ್ತು ಕೆ.ಕೆ) ಸೂಚಿತ ಹುದ್ದೆಗಳ ಪೈಕಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಯಾಗದೇ ಉಳಿದಿರುವ ಹುದ್ದೆಗಳನ್ನು ನಿಯಮಾನುಸಾರ ಬ್ಯಾಕ್ ಲಾಗ್ (Backlog) ಹುದ್ದೆಗಳೆಂದು ಪರಿಗಣಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

Dayanand 11/6/26

ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.)

ಬೆವಿಕಂ

For more job news visit : www.kpscvaani.com

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ
ಕಂಪನಿ ಕಾರ್ಯಾಲಯ, ಕೆ.ಆರ್ ವೃತ್ತ, ಬೆಂಗಳೂರು-560001

ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2524/2024-25/ ದಿನಾಂಕ: 11.06.2026 ಕ್ಕೆ ಅನುಬಂಧ

ವಿವಿಧ ಪ್ರವರ್ಗಗಳ ಅಡಿಯಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಬಾಕಿ ಉಳಿದಿರುವ ಬ್ಯಾಕ್ ಲಾಗ್ (BACKLOG) ಹುದ್ದೆಗಳ ವಿವರ.

ಹುದ್ದೆಯ ಹೆಸರು: ಕಿರಿಯ ಪವರ್ ಮ್ಯಾನ್ (ಎನ್.ಕೆ.ಕೆ):

ಸಮತಳ ಮೀಸಲಾತಿ	ಪ.ಜಾ	ಪ.ವ	ಸಾಮಾನ್ಯ	ಪ್ರ-1	ಪ್ರ-2ಎ	ಪ್ರ-2ಬಿ	ಪ್ರ-3ಎ	ಪ್ರ-3ಬಿ	ಒಟ್ಟು
ವಿಕಲಚೇತನ ಅಭ್ಯರ್ಥಿ	06	03	14	02	05	02	02	02	36
ಒಟ್ಟು	**06**	**03**	**14**	**02**	**05**	**02**	**02**	**02**	**36**

ಹುದ್ದೆಯ ಹೆಸರು: ಕಿರಿಯ ಪವರ್ ಮ್ಯಾನ್ (ಕೆ.ಕೆ):

ಸಮತಳ ಮೀಸಲಾತಿ	ಪ.ಜಾ	ಪ.ವ	ಸಾಮಾನ್ಯ	ಪ್ರ-1	ಪ್ರ-2ಎ	ಪ್ರ-2ಬಿ	ಪ್ರ-3ಎ	ಪ್ರ-3ಬಿ	ಒಟ್ಟು
ವಿಕಲಚೇತನ ಅಭ್ಯರ್ಥಿ	-	-	01	-	-	-	-	-	01
ಒಟ್ಟು	-	-	**01**	-	-	-	-	-	**01**

Dayanand
11/6/26

ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.)
ಬೆವಿಕಂ